**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**Spl.C(SC/ST).No.: 2/2020**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **9**
ಸಿ.ಡಬ್ಲ್ಯೂ ನಂಃ **11**
ಸಾಕ್ಷಿಯನ್ನು ದಿನಾಂಕಃ **17-06-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಸಣ್ಣ ಹಿರಿಯಪ್ಪ |
| ತಂದೆಯ ಹೆಸರು | ಃ | ಹುಲಿಗೆವ್ವ |
| ವಯಸ್ಸು | ಃ | **42** ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ ಸ್ಥಳ | ಃ | ತಿಗರಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ನಮ್ಮ ಊರಿನಲ್ಲಿ ಪ್ರತಿ ವರ್ಷ ಫಕೀರೇಶ್ವರ ಜಾತ್ರೆ ನಡೆಯುತ್ತದೆ. ಈ ಕೇಸಿನ ಆರೋಪಿಗಳು ಗೊತ್ತು. ಆರೋಪಿಗಳು ಸಮಿತಿ ಸದಸ್ಯರಾಗಿದ್ದು ಜಾತ್ರೆ ಮಾಡುತ್ತಾರೆ. **2019** ರಲ್ಲಿ ಸಾಮೂಹಿಕ ಲಗ್ನ ಏರ್ಪಡಿಸಲಾಗಿತ್ತು. ಒಟ್ಟು **25** ಜೊಡಿ ಮದುವೆ ನಿಗಧಿಪಡಿಸಲಾಗಿದ್ದು, ಅದರಲ್ಲಿ ನಮ್ಮ ಮಾದಿಗ ಜನಾಂಗದ **4** ಜೊಡಿಗಳು ಇದ್ದವು. ದಿನಾಂಕಃ **27-08-2019** ರಂದು ನಮ್ಮ ಊರಿನಲ್ಲಿ ಆರೋಪಿಗಳು ಫಕೀರೇಶ್ವರ ದೇವಸ್ಥಾನದ ಬಳಿ ಸಾಮೂಹಿಕ ಮದುವೆ ಕಾರ್ಯಾಕ್ರಮ ಏರ್ಪಡಿಸಿದ್ದರು. ನಾವು ಜನಾಂಗದವರು ಮಾತನಾಡಿಕೊಂಡು ಮದುವೆಯನ್ನು ಅಂಬೇಡ್ಕರ ಸಮೂದಾಯ ಭವನದ ಬಳಿ ರಸ್ತೆಯಲ್ಲಿ ಮದುವೆ ಮಾಡಿಸಿ ಜಾತ್ರೆಯಲ್ಲಿ ಊಟ ಮಾಡಿದೆವು. ಆರೋಪಿಗಳು ನಮಗೆ ಏನೂ ಹೇಳಿರಲಿಲ್ಲ. ಆರೋಪಿಗಳು ನಮಗೆ ಬೈದು ಬೆದರಿಕೆ ಹಾಕಿರಲಿಲ್ಲ. ಪೊಲೀಸರು ವಿಚಾರಿಸಿ ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಗಕರು ಕೋರಿಕೆ ಮೇರೆಗೆಸ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

**2).** ದಿನಾಂಕಃ **27-08-2019** ರಂದು ಬೆಳಿಗ್ಗೆ **8-00** ಗಂಟೆ ಸಮಯದಲ್ಲಿ ನಮ್ಮನ್ನು ಆರೋಪಿಗಳು ಕರೆಯಿಸಿ ನಿಮ್ಮ ಕೀಳು ಜಾತಿಯವರ ಮದುವೆ ಸಾಮೂಹಿಕ ಮದುವೆಯಲ್ಲಿ ನಾವು ಮಾಡಿಸುವುದಿಲ್ಲ, ನಿಮ್ಮ ಕೇರಿಯಲ್ಲಿ **4** ಜೋಡಿಗಳ ಮದುವೆ

ಮಾಡಿಸಿ ಊಟ ಮಾತ್ರ ಜಾತ್ರೆಯಲ್ಲಿ ಮಾಡಿ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಜಾತ್ರೆಯಲ್ಲಿ ಯಾವುದೇ ಗಲಾಟೆ ಹಾಗೂ ಗೊಂದಲ ಆಗ ಬಾರದು ಎಂಬ ಕಾರಣಕ್ಕಾಗಿ ನಮ್ಮ ಕೇರಿಯ ಅಂಬೇಡ್ಕರ ಭವನದ ಬಳಿ ಪಂಡಾಲ ಹಾಕಿ ನಮ್ಮ ಜನಾಂಗದವರ ಮದುವೆ ಮಾಡಿಸಿದ್ದೆವು ಎಂದರೆ ಅವರು ಏನೂ ಹೇಳಿರಲಿಲ್ಲ, ನಾವೇ ಮಾಡಿಸಿದ್ದೇವೆ ಎಂದು ಸಾಕ್ಷಿದಾರರು ನುಡಿಯುತ್ತಾರೆ. ಮದ್ಯಾಹ್ನ **12-00** ಗಂಟೆಗೆ ಆರೋಪಿಗಳು ಸಮುದಾಯದ ಬಳಿ ಬಂದಾಗ ಈ ರೀತಿ ಏಕೆ ಮಾಡಿದಿರಿ ನಮ್ಮ ಜನಾಂಗದವರ ಮದುವೆ ಸಾಮೂಹಿಕ ಮದುವೆಯಲ್ಲಿ ಏಕೆ ಮಾಡಿಸಲಿಲ್ಲ ಎಂದು ಕೇಳಿದೆವು ಎಂದರೆ ಸರಿಯಲ್ಲ. ನಂತರ ಆರೋಪಿತರು ಎಲ್ಲರೂ ಸೇರಿ ನಮಗೆ ಅವಾಚ್ಯವಾಗಿ ಬೈದು ನನಗೆ ಜೀವ ಬದರಿಕೆ ಹಾಕಿದರು ಎಂದರೆ ಸರಿಯಲ್ಲ. ಊರಿನಲ್ಲಿ ಎಲ್ಲಾ ಮದುವೆಗಳನ್ನು ಒಟ್ಟಾಗಿ ನಡೆಸದೆ ಅಸ್ಪೃಶ್ರತೆ ಆಚರಣೆ ಮಾಡಿರುತ್ತಾರೆ ಎಂದು ಆರೋಪಿಗಳ ವಿರುದ್ದ ನಾನು ಪೊಲೀಸರಿಗೆ <u>ನಿಪಿ-7 ರಂತೆ</u> ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಊರಿನಲ್ಲಿ ಜಗಳ ಏಕೆ ಬೇಕು ಎಂಬ ಕಾರಣಕ್ಕಾಗಿ ನಾನು ನಿಜ ವಿಚಾರ ಮುಚ್ಚಿಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ವೈಜೆಆರ್ ವಕೀಲರಿಂದ</u>

ಪಾಟೀ ಸವಾಲು ಏನೂ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ

**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**<u>Spl.C(SC/ST).No.: 2/2020</u>**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂ: **8**
ಸಿ.ಡಬ್ಲ್ಯೂ ನಂ: **10**
ಸಾಕ್ಷಿಯನ್ನು ದಿನಾಂಕ: **17-06-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

ಸಾಕ್ಷಿದಾರನ ಹೆಸರು : ದುರುಗಪ್ಪ
ತಂದೆಯ ಹೆಸರು : ಹನುಮಪ್ಪ
ವಯಸ್ಸು : **42** ವರ್ಷ
ಉದ್ಯೋಗ : ಕೂಲಿ ಕೆಲಸ
ವಾಸ ಸ್ಥಳ : ತಿಗರಿ

<u>ಸಾಕ್ಷಿಯ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರವರಿಂದ</u>

ನನಗೆ ಆರೋಪಿತರ ಪರಿಚಯ ಇದೆ ಅವರು ನಮ್ಮ ಊರಿನವರು. ಪ್ರತಿವರ್ಷ ನಮ್ಮ ಊರಿನ ಫಕೀರೇಶ್ವರ ದೇವಸ್ಥಾನ ಮತ್ತು ಸಾರೆಮ್ಮ ಗುಡಿಯ ಹತ್ತಿರ ಸಾಮೂಹಿಕ ಮದುವೆ ಕಾರ್ಯಕ್ರಮ ನೆರವೇರಿಸುತ್ತಾರೆ. ಪ್ರತಿವರ್ಷ ಫಕೀರೇಶ್ವರ ದೇವಸ್ಥಾನದ ಜಾತ್ರೆ ನಡೆಯುತ್ತದೆ. ದಿನಾಂಕ: **27-08-2019** ರಂದು ಫಕೀರೇಶ್ವರ ದೇವಸ್ಥಾನದಲ್ಲಿ ಸಾಮೂಹಿಕ ಮದುವೆ ಇತ್ತು. ಒಟ್ಟು **25** ಜೋಡಿ ಮದುವೆಗೆ ಬಂದಿದ್ದರು. ಮಾದಿಗ ಜನಾಂಗಕ್ಕೆ ಸೇರಿದ **4** ಜೋಡಿಗಳು ಸಹ ಇದ್ದರು. ಮದ್ಯಾಹ್ನ **12-00** ಗಂಟೆಗೆ ನಮ್ಮ ಮಂದಿಗೆ ಎಸ್.ಸಿ. ಕಾಲೋನಿಯಲ್ಲಿ ಇರುವ ಅಂಬೇಡ್ಕರ ಸಮೂದಾಯ ಭವನದಲ್ಲಿ ಮದುವೆ ಮಾಡಿಸಿದೆವು.

**2).** ಊರಿನವರಿಗೂ ಮತ್ತು ನಮ್ಮ ಕೇರಿಯವರಿಗೂ ಗಲಾಟೆ ಆಯಿತು. ಮದುವೆ ಸಂಬಂಧ ನಮ್ಮನ್ನು ಊರಿನ ಒಳಗೆ ಏಕೆ ಕರೆದುಕೊಂಡಿಲ್ಲ ಎಂದು ಗದ್ದಲ ಆಯಿತು. ಕೇರಿಯಲ್ಲಿ ತಾಳಿ ಕಟ್ಟಿದ ನಂತರ ನಾವೆಲ್ಲರೂ ಜಾತ್ರೆಯಲ್ಲಿ ಊಟ ಮಾಡಿದೆವು. ಆರೋಪಿಗಳು ನನಗೆ ಏನೂ ಹೇಳಿರಲಿಲ್ಲ. ಆರೋಪಿಗಳು ನಮಗೆ ಬೈದು ಹೆದರಿಸಿರಲಿಲ್ಲ. ಪೊಲೀಸರು ಬಂದಿದ್ದರು ಇದರಂತೆ ನಡೆದಿದೆ ಉಳಿದದ್ದು ನಡೆದಿರಲಿಲ್ಲ ಎಂದು ಹೇಳಿರುತ್ತೇನೆ. ಆರೋಪಿಗಳ ವಿರುದ್ಧ ಯಾವ ಕಾರಣಕ್ಕಾಗಿ ಕೇಸ್ ಮಾಡಲಾಗಿದೆ ಎಂದು ಗೊತ್ತಿಲ್ಲ.

(ಈ ಹತಂದಲ್ಲಿ ಸರ್ಕಾರಿ ಅಭಿಯೋಗಕರು ಕೋರಿಕೆ ಮೇರೆಗೆಸ ಸದರಿ

ಸಾಕ್ಷಿದಾರನನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

3). ದಿನಾಂಕಃ **27-08-2019** ರಂದು ಫಕೀರೇಶ್ವರ ದೇವಸ್ಥಾನದ ಸಮಿತಿಯವರಾದ ಆರೋಪಿಗಳು ನನ್ನನ್ನು ಮತ್ತು ಊರಿನ ಹಿರಿಯರನ್ನು ಕರೆಸಿದ್ದರು ಎಂದರೆ ಸರಿ. ಫಕೀರೇಶ್ವರ ದೇವಸ್ಥಾನದಲ್ಲಿ ಮಾದಿಗ ಜನಾಂಗದವರ ಮದುವೆ ಮಾಡಿಸುವುದಿಲ್ಲ ನೀವು ನಿಮ್ಮ ಕೇರಿಯಲ್ಲಿ ಮದುವೆ ಮಾಡಿಸಿಕೊಳ್ಳಿ ಎಂದು ಹೇಳಿದರು ಎಂದರೆ ಸರಿಯಲ್ಲ. ಊಟವನ್ನು ಮಾತ್ರ ಜಾತ್ರೆಯಲ್ಲಿ ಮಾಡಿ ಎಂದು ಹೇಳಿದರು ಎಂದರೆ ನಾವು ಜಾತ್ರೆಯಲ್ಲಿ ಮಾಡಿದೆವು ಎಂದು ಸಾಕ್ಷಿದಾರ ನುಡಿದಿರುತ್ತಾರೆ. ಅವರು ಆ ರೀತಿ ಹೇಳಿದ ಕಾರಣ ನಾವು ನಮ್ಮ ಕೇರಿಯಲ್ಲಿ ಇರುವ ಅಂಬೇಡ್ಕರ ಭವನದಲ್ಲಿ ನಮ್ಮ ಜನಾಂಗದ ಜೋಡಿಗಳಿಗೆ ಮದುವೆ ಮಾಡಿಸಿ ಊಟವನ್ನು ಜಾತ್ರೆಯಲ್ಲಿ ಮಾಡಿದೆವು ಎಂದರೆ ನಾವು ಊಟ ಜಾತ್ರೆಯಲ್ಲಿ ಮಾಡಿದೆವು. ನಂತರ ಆರೋಪಿಗಳು ನಮ್ಮ ಸಮುದಾಯ ಭವನದ ಬಳಿ ಬಂದಾಗ ಈ ರೀತಿ ಏಕೆ ಮಾಡಿದಿರಿ ಎಂದು ನಾವು ಕೇಳಿದೆವು ಎಂದರೆ ಸರಿಯಲ್ಲ. ಆಗ ಸೂಳೇ ಮಕ್ಕಳೆ ನಾವು ಹೇಳಿದ ಹಾಗೆ ಕೇಳಬೇಕು ಇಲ್ಲವಾದರೆ ಹೊಡೆದು ಕೊಂದುಬಿಡುತ್ತೇವೆ ಎಂದು ಹೇಳಿ ಬೆದರಿಗೆ ಹಾಕಿದರು ಎಂದರೆ ಸರಿಯಲ್ಲ. ನಮ್ಮ ಜನಾಂಗದವರ ಮದುವೆಯನ್ನು ಸಾಮೂಹಿಕ ಮದುವೆಯಲ್ಲಿ ಮಾಡಿಸದೆ ಬಹಿಸ್ಕಾರ ಹಾಕಿ ಅಸ್ಪೃಶ್ಯತೆ ಆಚರಣೆ ಮಾಡಿರುತ್ತಾರೆ ಹಾಗೂ ಅವಾಚ್ಯ ಶಬ್ದಗಳಿಂದ ಬೈದು ಬೆದರಿಕೆ ಹಾಕಿರುತ್ತಾರೆ ಎಂದು ನಾನು ಪೊಲೀಸರಿಗೆ ನಿಪಿ.**6** ರಂತೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಊರಿನಲ್ಲಿ ಜಗಳ ಏಕೆ ಬೇಕು ಎಂಬ ಕಾರಣಕ್ಕಾಗಿ ನಾನು ನಿಜ ವಿಚಾರ ಮುಚ್ಚಿಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ವೈಜೆಆರ್ ವಕೀಲರಿಂದ

4). ನಮ್ಮ ಊರಿನಲ್ಲಿ ಮೊದಲಿನಿಂದಲೂ ನಮ್ಮ ಜನಾಂಗದವರು ಸಾರೆಮ್ಮ ದೇವಸ್ಥಾನ ಅಥವಾ ಸಮುದಾಯ ಭವನದಲ್ಲಿಯೆ ಮದುವೆ ಕಾರ್ಯಾಕ್ರಮಗಳನ್ನು ಮಾಡುತ್ತಾ ಬಂದಿರುತ್ತೇವೆ ಎಂದರೆ ಸರಿ. ನಮ್ಮ ಯಜಮಾನರು ಅಲ್ಲಿಯೇ ಮಾಡಿಕೊಳ್ಳೋಣ ಎಂದು ಹೇಳಿದ ಕಾರಣ ನಾವು ನಮ್ಮ ಜನಾಂಗದ ಜೋಡಿಗಳಿಗೆ ಸಮುದಾಯ ಭವನದಲ್ಲಿ ಮದುವೆ ಮಾಡಿಸಿದೆವು. ಫಕೀರೇಶ್ವರ ದೇವಸ್ಥಾನದ ಬಳಿ ಆಗುವ ಸಾಮೂಹಿಕ ಮದುವೆಯಲ್ಲಿ ನಮ್ಮ ಜನಾಂಗದವರ ಮದುವೆ ಮಾಡಿಸಬೇಕು ಎಂದು ಕೇಳಿರುವುದು ನನಗೆ ಗೊತ್ತಿಲ್ಲ, ಯಜಮಾನರಿಗೆ ಗೊತ್ತಿದೆ. ನನ್ನ ಬಳಿ ಆರೋಪಿತರು ಜಗಳ ಮಾಡಿರಲಿಲ್ಲ. ಆರೋಪಿಗಳು ನಮ್ಮ ಕೇರಿಗೆ ಬಂದಿರಲಿಲ್ಲ ಹಾಗೂ ಅಸ್ಪೃಶ್ಯತೆ ಆಚರಣೆ ಮಾಡಿ ನಮಗೆ ಬೈದಿರಲಿಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ